**ಮೇಷ್ಟ್ರು:** ಕೃಷ್ಣದೇವರಾಯನ ಕಾಲದಲ್ಲಿ ಮುತ್ತು ರತ್ನಗಳನ್ನು ರಾಶಿ ಹಾಕಿಕೊಂಡು ಹಾದಿಬೀದಿಯ ಬದಿಗಳಲ್ಲಿ ಮಾರಾಟ ಮಾಡುತ್ತಿದ್ದರು... ಈ ವಾಕ್ಯವನ್ನು ವರ್ತಮಾನ ಕಾಲಕ್ಕೆ ಬದಲಾಯಿಸಿ.
**ವಿದ್ಯಾರ್ಥಿ:** ಅಂತ ಕಾಲ, ವರ್ತಮಾನ ಕಾಲಕ್ಕಿರಲಿ... ಯಾವ ಕಾಲಕ್ಕೂ ಬರಲು ಸಾಧ್ಯವಿಲ್ಲ ಸರ್!

**ಗಂಡ:** ಏನ್ ಸಮಾಚಾರ, ಇಷ್ಟೊಂದು ಪಲಾವ್ ಮಾಡಿದ್ದೀಯಾ? ಯಾರಾದ್ರೂ ನಿಮ್ ಕಡೇಯವರು ಬರ್ತಾರಾ?
**ಹೆಂಡತಿ:** ನೀವೆ ಹೇಳ್ತಿರ್ತೀರಿ ಅಲ್ವಾ, ಏನೇ ಮಾಡಿದ್ರೂ ದೊಡ್ಡದಾಗಿ ಮಾಡ್ಬೇಕು ಅಂತ. ಅದಕ್ಕೆ ಮಾಡ್ದೆ.

**ಮೇಷ್ಟ್ರು:** ಉತ್ತರ ಪತ್ರಿಕೆ ಹತ್ತು ಪೇಜ್‌ಗಳಿದ್ರೂ ಒಂದೇ ಒಂದು ಪೇಜ್ ಬರೆದಿದ್ದೀಯಾ?
**ವಿದ್ಯಾರ್ಥಿ:** ಹತ್ತು ಕಟ್ಟುವಲ್ಲಿ ಒಂದು ಮುತ್ತು ಕಟ್ಟು ಅಂತ ನೀವೇ ಆಗಾಗ ಹೇಳ್ತಾ ಇರ್ತೀರ.

**ಕಾರು ಮಾಲೀಕ:** ನೆಟ್ಟಗಿರೋ ರೋಡಲ್ಲಿ ಕರ್ಕೊಂಡ್ ಬರೋದು ತಾನೆ?
**ಕಾರು ಚಾಲಕ:** ನೆಟ್ಟಗಿರೋ ರಸ್ತೆಗಳು ಒಳ್ಳೆಯ ಚಾಲಕನನ್ನು ರೂಪಿಸಲ್ಲ ಅಂತ ನೀವೆ ಹೇಳಿದ್ರಿ ಅಲ್ವಾ...




**ಅಮ್ಮ:** ಕೂತ್ಕೊಂಡು ಊಟ ಮಾಡೋ. ನಿಂತ್ಕೊಂಡೆ ಊಟ ಮಾಡುವಂತಹ ಅವಸರ ಏನಿದೆ?
**ಮಗ:** ನಿನ್ನೆ ಏನೋ ಡೈಲಾಗ್ ಹೇಳ್ತಿದ್ದೆ... 'ಕೂತು ಉಣ್ಣೋರಿಗೆ ಕುಡಿಕೆ ಹೊನ್ನು ಸಾಲಲ್ಲ' ಅಂತ. ನಾನ್ ಕೂತ್ಕೊಂಡ್ ಊಟ ಮಾಡೋದು ಬೇಡ, ನೀನ್ ಡೈಲಾಗ್ ಹೊಡೆಯೋದು ಬೇಡ. ನಾನ್ ಹೀಗೇ ಊಟ ಮಾಡ್ತೀನಿ.

**ಮೇಷ್ಟ್ರು:** ಉಗುರು ತೋರಿದರೆ ಬೆರಳನ್ನೇ ನುಂಗುವಂತೆ ವಿದ್ಯಾರ್ಥಿಗಳು ಇರಬೇಕು.
**ವಿದ್ಯಾರ್ಥಿ:** ನಾನು ಶುದ್ಧ ಸಸ್ಯಾಹಾರಿ ಸರ್!

ಒಂದಷ್ಟು ಸಾಹಿತ್ಯವನ್ನು ಓದಿಕೊಂಡಿದ್ದ ಕನ್ಯಾಮಣಿ ಸರಸ್ವತಿಯನ್ನು ನೋಡಲು ಬಂದಿದ್ದ ವರನ ತಂದೆ (ಯಜಮಾನ) ಹೀಗಂದ...
**ಯಜಮಾನ:** ನಮ್ಮ ಮನೆಗೆ ಸೊಸೆಯಾಗಿ ಬಂದ ಮೇಲೆ ನೀನು ಹೇಗಿರ್ತೀಯಾ?
**ಸರಸ್ವತಿ:** ಹಾಲು ತರುವ ಮನೆಗೆ ಬರಿ ನೀರು ತಾರೆನು.
**ಯಜಮಾನ:** ಮೊದಲು ನೀರು ತರಬೇಕು ನಂತರ ಹಾಲೂ ತರಬೇಕು.

**ಸೊಸೆ:** ಬರ್ತಾ ಬರ್ತಾ ನಿಮ್ದು ಹೆಚ್ಚಾಯ್ತು.
**ಅತ್ತೆ:** ಹೌದಮ್ಮ ಹೌದು. ನೀನು ಬಂದ್ಮೇಲೆ ಅಭಿವೃದ್ಧಿ ಆಗ್ತಾ ಇದ್ದೀನಿ.

**ಗಣಪ:** ಏನ್ ಸ್ವಾಮಿ ಪ್ರತಿನಿತ್ಯ ಚಾಚೂ ತಪ್ಪದೆ ಸೂರ್ಯ ನಮಸ್ಕಾರ ಮಾಡಿ ಯೋಗ ಬರ್ತದೆ ಅಂತ ಹೇಳಿದ್ರಿ. ಒಂದು ತಿಂಗಳಿಂದ ಚಳಿ ಅಂತಾನೂ ನೋಡದೆ ಬೆಳ್ಳಂಬೆಳಿಗ್ಗೆ ಸೂರ್ಯ ನಮಸ್ಕಾರ ಮಾಡ್ತಾ ಇದ್ದೀನಿ ಯಾವ ಯೋಗಾನೂ ಬರ್ಲಿಲ್ಲ.
**ಜ್ಯೋತಿಷಿ:** ಸೂರ್ಯ ನಮಸ್ಕಾರ ಮಾಡೋದೇ ಒಂದು ಯೋಗ.

**ಅಮ್ಮ:** ಯಾಕೋ ಬಗ್ಗಿ ಓದ್ತಾ ಇದ್ದೀಯಾ?
**ಮಗ:** ಮೇಷ್ಟ್ರು ಮೈ ಬಗ್ಗಿಸಿ ಓದ್‌ಬೇಕು ಅಂತ ಹೇಳವ್ರೆ.


ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ

---

**ಗೆಳೆಯ:** ಏನೋ ಗುಂಡ ನೀನು ಯಾವಾಗಲೂ ಸೆಕೆಂಡ್ ಕ್ಲಾಸಿನಲ್ಲೇ ಪ್ರಯಾಣ ಮಾಡುತ್ತೀಯಲ್ಲ?
**ಗುಂಡ:** ಯಾಕೆಂದರೆ ಥರ್ಡ್ ಕ್ಲಾಸ್ ಇಲ್ಲವಲ್ಲ ಅದಕ್ಕೆ.

**ಗೆಳೆಯ:** ತಲೆ ಹೊಟ್ಟಿಗೆ ಸುಲಭವಾದ ಚಿಕಿತ್ಸೆ ಯಾವುದು?
**ಗುಂಡ:** ತಲೆಯನ್ನು ನುಣ್ಣಗೆ ಬೋಳಿಸಿಕೊಳ್ಳುವುದು.

**ಗಿರಾಕಿ:** ಏನಯ್ಯಾ ಈ ಉಪ್ಪಿಟ್ಟಿಗೆ ಉಪ್ಪು, ಖಾರ ಏನೂ ಇಲ್ಲ. ಸಪ್ಪಗೆ ಇದೆ?
**ಮಾಣಿ:** ನೀವು ತಿಂತಿರೋದು ಕೇಸರಿಭಾತ್!




**ಮಹಿಳೆ:** ಡಾಕ್ಟರ್ ನಿನ್ನೆಯಿಂದ ವಿಪರೀತ ಹೊಟ್ಟೆನೋವು.
**ವೈದ್ಯ:** ಬೆಳಿಗ್ಗೆ ನೀವು ಏನು ತಗೋತೀರಿ? ಹಾಲು, ಕಾಫಿ, ಟೀ, ಹಾರ್ಲಿಕ್ಸ್?
**ಮಹಿಳೆ:** ಅಯ್ಯೋ ಈಗ ಅವೆಲ್ಲ ಏನೂ ಬೇಡ ಡಾಕ್ಟರ್, ಸುಮ್ಮನೆ ನಿಮಗೇಕೆ ತೊಂದರೆ.

**ಗುಂಡ:** ಜ್ಯೋತಿಷಿಗಳೇ ನನಗೀಗ 35 ವರ್ಷ. ಏನೇ ಮಾಡಿದರೂ ನನ್ನ ಮದುವೆಯಾಗುತ್ತಿಲ್ಲ.
**ಜ್ಯೋತಿಷಿ:** ಹೇಗೆ ಆಗುತ್ತದಪ್ಪಾ? ನಿನ್ನ ಜಾತಕ ಫಲದಲ್ಲಿ ನೀನು ನಿನ್ನ ಜೀವಮಾನವಿಡೀ ಬರೀ ಸುಖ ಸಂತೋಷ ನೆಮ್ಮದಿಯನ್ನೇ ಅನುಭವಿಸಬೇಕಂತ ಬರೆದಿದೆ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು